


ಪೊಲೀಸ್: ನೀನು ಎರಡು ಮದುವೆ ಆಗಿರುವ ಬಗ್ಗೆ ಸ್ಪಷ್ಟ ಸಾಕ್ಷಿ ಸಿಗದಿದ್ದರಿಂದ ನಿನ್ನನ್ನು ಬಿಡುತ್ತಿದ್ದೇನೆ. ನೀನಿನ್ನು ಮನೆಗೆ ಹೋಗಬಹುದು.

ತಿಮ್ಮ: ಯಾರ ಮನೆಗೆ ಸಾರ್? ಮೊದಲ ಹೆಂಡತಿ ಮನೆಗೋ, ಇಲ್ಲಾ ಎರಡನೇ ಹೆಂಡತಿ ಮನೆಗೋ?

★★★



ಮಗ: ಅಪ್ಪಾ ಶಾಲೆಯಲ್ಲಿ ಒಬ್ಬ ಹುಡುಗ ನನಗೆ ಹೊಡೆದು ಬಿಟ್ಟ.

ಅಪ್ಪಾ: ಅವನ್ಯಾರು ಅಂತ ನೀನು ಗುರುತಿಸಬಲ್ಲೆಯಾ?

ಮಗ: ಗುರುತಿಸುತ್ತೇನಪ್ಪಾ. ಅವನ ಒಂದು ಹಲ್ಲು ನನ್ನ ಹತ್ತಿರ ಇದೆ.

–ಮುರಲೀಧರ ಕುಲಕರ್ಣಿ, ಬೀದರ್

ಅಮ್ಮ: ಟಿಪ್ಪು ಸುಲ್ತಾನ್ ಯಾರು?

ಗುಂಡ: ಗೊತ್ತಿಲ್ಲ!

ಅಮ್ಮ: ಓದಿನ ಕಡೆ ಗಮನ ಕೊಡು!

ಗುಂಡ: ಅಮ್ಮ, ಹೇಮಾ ಆಂಟಿ ಯಾರು?

ಅಮ್ಮ: ಗೊತ್ತಿಲ್ಲ.

ಗುಂಡ: ಸ್ವಲ್ಪ ಅಪ್ಪನ ಕಡೆ ಗಮನ ಕೊಡು!

–ಸುಮಿತ್ರಾ ಕೆ.ಆರ್.

ಟೀಚರ್: ನೀವೆಲ್ಲ ಎಷ್ಟು ಹೊತ್ತಿಗೆ ಮಲಗಿ ಎಷ್ಟು ಹೊತ್ತಿಗೆ ಏಳುತ್ತೀರಿ?

ನಾಗೇಶ: ನಾನು ರಾತ್ರಿ 10 ಗಂಟೆಗೆ ಮಲಗ್ತೀನಿ, ಬೆಳಿಗ್ಗೆ 7ಕ್ಕೆ ಏಳ್ತೀನಿ!

ರಮೇಶ: ನಾನು 11ಗಂಟೆಗೆ ಮಲಗ್ತೀನಿ, ಬೆಳಿಗ್ಗೆ 6ಗಂಟೆಗೆ ಏಳ್ತೀನಿ!

ಟೀಚರ್: ಇನ್ನೂ ಬೇಗ ಏಳುವವರು ಯಾರಾದ್ರೂ ಇದ್ದೀರಾ?

ಪುಂಡ: ನಾನು 9ಗಂಟೆಗೆ ಮಲಗ್ತೀನಿ, 4ಗಂಟೆಗೆ ಏಳ್ತೀನಿ!

ಟೀಚರ್: ವೆರಿ ಗುಡ್, ಅಷ್ಟು ಬೇಗ ಎದ್ದು ಏನ್ ಮಾಡ್ತೀಯಾ?

ಪುಡ: ಮೂತ್ರ ಮಾಡಿ, ಕೂಡಲೇ ಮಲಗುತ್ತೇನೆ!

★★★

## ಕರಾರುವಕ್ಕಾದ ಅಂತರ

ನ್ಯಾಯಾಧೀಶರು: ಅಪಘಾತ ಸ್ಥಳದಿಂದ ನೀವು ಎಷ್ಟು ದೂರದಲ್ಲಿದ್ದಿರಿ?

ಸಾಕ್ಷಿ: ಹತ್ತು ಅಡಿ ಆರು ಇಂಚು!

ನ್ಯಾಯಾಧಿಶರು: ಅಷ್ಟೊಂದು ಕರಾರುವಕ್ಕಾಗಿ ಹೇಗೆ ಹೇಳ್ತೀರಾ?

ಸಾಕ್ಷಿ: ಯಾರಾದ್ರೂ ಇಂತಹ ಮುರ್ಖ ಪ್ರಶ್ನೆ ಕೇಳಬಹುದು ಎಂದು ನಾನು ಮೊದಲೇ ಅಳತೆ ಮಾಡಿಕೊಂಡಿದ್ದೆ!

–ಪಿ.ಜಯವಸಂತ ಪೈ, ಕುಂದಾಪುರ

ಪ್ರತಿಯೊಬ್ಬ ಮಹಿಳೆಗೂ ಒಬ್ಬ ಗಂಡನಿರಲೇ ಬೇಕು. ಏಕೆಂದರೆ ದೈನಂದಿನ ಜೀವನದಲ್ಲಿ ಹಲವಾರು ತಪ್ಪುಗಳು ನಡೆಯುತ್ತಲೇ ಇರುತ್ತವೆ. ಎಲ್ಲದಕ್ಕೂ ದೇವರು ಅಥವಾ ಸರ್ಕಾರವನ್ನು ದೂಷಿಸಲು ಸಾಧ್ಯವಿಲ್ಲ!

★★★

ನಟ: ನನ್ನ ಪರಿಚಯ ಆಯ್ತಾ? ನಾನು ದಿನಾ ಟಿವಿಯಲ್ಲಿ ಬರ್ತೀನಿ.

ಗುಂಡ: ಸಾರಿ ಸರ್, ನಾನು ದಿನಾ ಬಸ್‌ನಲ್ಲಿ ಬರ್ತೀನಿ. ಹಾಗಾಗಿ ನಿಮ್ಮ ಪರಿಚಯ ಆಗಿಲ್ಲ.

★★★




ಒಮ್ಮೆ ಹರೆಯದ ಹುಡುಗರ ಗುಂಪೊಂದು ತೀರ್ಥಯಾತ್ರೆಗೆ ಹೊರಟಿತು. ಅವರ ಗುರು ಅವರಿಗೆ ಹೀಗೆ ಹೇಳಿದರು. 'ದಾರಿಯಲ್ಲಿ ನೀವು ಸುಂದರವಾದ ಹುಡುಗಿಯರನ್ನು ನೋಡಿದರೆ ವಿಚಲಿತರಾಗದೇ, ಕಣ್ಣು ಮುಚ್ಚಿ 'ಹರಿ ಓಂ' ಎಂದು ಹೇಳಿ'

ಎರಡುಮೂರು ದಿನಗಳ ನಂತರ ಒಬ್ಬ ಯಾತ್ರಿ 'ಹರಿ ಓಂ' ಎಂದು ಉಚ್ಚರಿಸಿದನು. ಕೂಡಲೇ ಉಳಿದವರೆಲ್ಲರೂ ಒಕ್ಕೊರಲಿನಿಂದ ಕೇಳಿದರು 'ಎಲ್ಲಿ... ಎಲ್ಲಿ?'

–ಡಾ.ಪ್ರತಿಭಾ ಕಾರಂತ